International Journal of Kannada Research
www.kannadajournal.com

**ISSN: 2454–5813**
IJKR 2023; 9(3): 114-116
© 2023 IJKR
www.kannadajournal.com
Received: 26-06-2023
Accepted: 30-07-2023

**ಡಾ. ಮಲ್ಲಿಕಾ ಕುಮಾರಿ**
ಅತಿಥಿ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ
ಕಾಲೇಜು, ಉಪ್ಪಿನಂಗಡಿ,
ಕರ್ನಾಟಕ, ಭಾರತ

Corresponding Author:
**ಡಾ. ಮಲ್ಲಿಕಾ ಕುಮಾರಿ**
ಅತಿಥಿ ಉಪನ್ಯಾಸಕರು,
ಸರಕಾರಿ ಪ್ರಥಮ ದರ್ಜೆ
ಕಾಲೇಜು, ಉಪ್ಪಿನಂಗಡಿ,
ಕರ್ನಾಟಕ, ಭಾರತ

# ದ್ರಾವಿಡ ಭಾಷಾವರ್ಗದಲ್ಲಿ ತುಳು ಭಾಷೆಯ ಸ್ಥಾನಮಾನ

**ಡಾ. ಮಲ್ಲಿಕಾ ಕುಮಾರಿ**

**ಪೀಠಿಕೆ**

ತುಳುಭಾಷೆಯು ದಕ್ಷಿಣ ಭಾರತದ ಪ್ರಾಚೀನ ಭಾಷೆಗಳಲ್ಲಿ ಒಂದಾಗಿದ್ದು, ದ್ರಾವಿಡ ಭಾಷಾವರ್ಗದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿದೆ. ಕನ್ನಡನಾಡಿನ ಪಡುಗಡಲ ತಡಿಯ ಪ್ರದೇಶವನ್ನು 'ತುಳುನಾಡು' ಎಂದೇ ಕರೆಯುತ್ತಾರೆ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಕಲ್ಯಾಣಪುರಿ (ಉಡುಪಿಯಿಂದ ಹತ್ತು ಕಿ.ಮೀ. ಉತ್ತರಕ್ಕಿರುವ ಕಲ್ಯಾಣಪುರ ಹೊಳೆ) ಮತ್ತು ಕಾಸರಗೋಡಿನ ಚಂದ್ರಗಿರಿ ಹೊಳೆಗಳ ನಡುವಿನ ಪ್ರದೇಶದ ಜನರು ಹೆಚ್ಚಾಗಿ ತುಳು ಮಾತನಾಡುತ್ತಾರೆ. ತುಳು ಭಾಷೆಯನ್ನಾಡುವವರು 'ತುಳುವರು' ಎಂಬ ಅಭಿಪ್ರಾಯದೊಂದಿಗೆ ತುಳುನಾಡಿನಲ್ಲಿ ವಾಸಿಸುವವರು 'ತುಳುವರು' ಎಂಬ ಅಭಿಪ್ರಾಯವೂ ಇದೆ. ಭೌಗೋಳಿಕವಾಗಿ ಕೇರಳದ ಕಾಸರಗೋಡು ಜಿಲ್ಲೆಯ ಕೆಲವು ಪ್ರದೇಶಗಳು, ಕರ್ನಾಟಕದ ಕರಾವಳಿಯ ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು ಪ್ರಾಚೀನ ತುಳುನಾಡು ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ವಾಸಿಸುವ ಬಹುಸಂಖ್ಯಾತ ಜನರು (ಮಾತೃ ಭಾಷೆಯಾಗಿ ಮತ್ತು ವ್ಯಾವಹಾರಿಕ ಭಾಷೆಯಾಗಿ) ಮಾತನಾಡುವ ಭಾಷೆ ತುಳು. ಸುಮಾರು ಒಂದು ಕೋಟಿ ಜನರು ತುಳುಭಾಷೆಯನ್ನು ಮಾತನಾಡುತ್ತಾರೆಂದು ಅಂದಾಜಿಸಲಾಗಿದೆ. ದೇಶ ವಿದೇಶಗಳಲ್ಲೂ ತುಳು ಮಾತನಾಡುವ ಜನರಿದ್ದಾರೆ. ಐತಿಹಾಸಿಕವಾಗಿ ತುಳುನಾಡು ಎಂದರೆ ಕೇವಲ ತುಳು ಮಾತನಾಡುವ ಪ್ರದೇಶ ಎಂಬ ಸೀಮಿತ ಅರ್ಥವಿರಲಿಲ್ಲ. ಅದೊಂದು ಆಡಳಿತ ವಿಭಾಗಸೂಚಕ ಪದವೇ ಹೊರತು ಒಂದು ಭಾಷೆ ಪ್ರಚಲಿತವಿದ್ದ ಸೀಮಿತ ಪ್ರದೇಶವಾಗಿರಲಿಲ್ಲ ಎಂಬುದು ಚಾರಿತ್ರಿಕ ಹಿನ್ನಲೆಯಿಂದ ತಿಳಿದು ಬರುತ್ತದೆ.

ಕ್ರಿ.ಪೂ. 263ನೆಯ ಸಿದ್ದಾಪುರದಲ್ಲಿ ದೊರೆತ ಅಶೋಕನ ಕಾಲದ ಶಾಸನ ಪ್ರಕಾರ ತುಳು ರಾಜ್ಯವನ್ನು ಸತ್ಯಪುತ್ರ (ಸತಿಯ ಪುತ್ರ)ರೂ, ಮಲೆಯಾಳವನ್ನು ಕೇರಳಪುತ್ರರೂ ಸ್ವತಂತ್ರವಾಗಿ ಆಳಿಕೊಂಡಿದ್ದರೆಂದು ತಿಳಿದುಬರುತ್ತದೆ. ಕ್ರಿ.ಪೂ. 3ನೇ ಶತಮಾನದಿಂದ ಕದಂಬ ಅರಸರು ಈ ತುಳು ದೇಶವನ್ನು ಮೇಲಧಿಕಾರಿಗಳಾಗಿ ಕ್ರಿ.ಶ. 6ನೇ ಶತಮಾನದವರೆಗೆ ಆಳುತ್ತಿದ್ದರು. ತಮಿಳು ಸಂಘಂನವರ 'ಅಗನಾನೂರು' ಎಂಬ ತಮಿಳು ಕಾವ್ಯದಲ್ಲಿ 'ತುಳುವರು' ಎಂಬ ಪದವಿದೆ. 12ನೇ ಶತಮಾನದ ಪೂರ್ವಾರ್ಧದ ವಿಷ್ಣುವರ್ಧನನ ಕಾಲದ ಒಂದು ಶಾಸನದಲ್ಲಿನ ಪದ್ಯವೊಂದರಲ್ಲಿ 'ತುಳುವರು' ಎಂಬ ಪದವಿದೆ. ಇಂತಹ ಸುದೀರ್ಘ ಪರಂಪರೆ ಇರುವ ತುಳು ಭಾಷೆ ಗ್ರಾಂಥಿಕ ಸ್ವರೂಪವನ್ನು

ಪಡೆದಿದ್ದರೂ ಆಡುನುಡಿಯಾಗಿ ಪ್ರಸಿದ್ಧವಾಗಿದೆ ಮಾತ್ರವಲ್ಲ, ಭಾಷಾ ವಿಜ್ಞಾನಿಗಳ ಗಮನವನ್ನೂ ಸೆಳೆದಿದೆ. ಭಾಷೆಗಳ ವೈಜ್ಞಾನಿಕ ಅಧ್ಯಯನಕ್ಕೆ ಭಾಷಾವಿಜ್ಞಾನದ ಸಂಶೋಧನೆಗಳು ದಾರಿಯಾದವು. ಭಾಷೆಯ ವಾಂಶಿಕ ವರ್ಗೀಕರಣಕ್ಕೆ ಹೆಚ್ಚು ಮಹತ್ತ್ವ ದೊರೆಯಿತು. ಈ ಹಿನ್ನಲೆಯಲ್ಲಿ ತುಳುವನ್ನು ದ್ರಾವಿಡ ಭಾಷಾ ಪರಿವಾರದಲ್ಲಿ ಗುರುತಿಸಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಪ್ರಮುಖ ಭಾಷೆಗಳು ತುಳು, ತಮಿಳು, ಕನ್ನಡ, ತೆಲುಗು ಮತ್ತು ಮಲಯಾಳಂ. ಪ್ರಮುಖ ಭಾಷೆಗಳೊಂದಿಗೆ ತುಳುವನ್ನು ಸೇರಿಸಿ ಪಂಚ ದ್ರಾವಿಡ ಭಾಷೆಗಳೆಂದು ಕರೆದಿದ್ದಾರೆ. ಇವುಗಳೆಲ್ಲವೂ ಮೂಲದ್ರಾವಿಡವೆಂಬ ಒಂದೇ ಭಾಷೆಯಿಂದ ಕವಲೊಡೆದುವೆಂದು ಭಾಷಾವಿದ್ವಾಂಸರ ಹೇಳಿಕೆ. ದಕ್ಷಿಣ ದ್ರಾವಿಡದ ಪ್ರಾಚೀನ ಭಾಷೆಗಳಲ್ಲಿ ತುಳು ಒಂದಾಗಿದೆ.

ಭಾಷಾವಿಜ್ಞಾನಿ ರಾಬರ್ಟ್ ಕಾಲ್ಡ್‌ವೆಲ್ ತನ್ನ "ದಿ ಕಂಪಾರೇಟಿವ್ ಗ್ರಾಮರ್ ಆಫ್ ದಿ ಡ್ರವೀಡಿಯನ್ ಆರ್ ಸೌತ್ ಇಂಡಿಯನ್ ಫ್ಯಾಮಿಲಿ ಆಫ್ ಲ್ಯಾಂಗ್ವೇಜಸ್" (1856) ಗ್ರಂಥದಲ್ಲಿ ತುಳುವಿನ ಬಗ್ಗೆ 'ದ್ರಾವಿಡ ಭಾಷಾಪರಿವಾರದಲ್ಲಿ ಸ್ವತಂತ್ರವಾಗಿ ನಿಲ್ಲಬಲ್ಲ ಚೆನ್ನಾಗಿ ಬೆಳೆದ ಭಾಷೆಗಳಲ್ಲಿ ತುಳು ಒಂದು' ಎಂದು ಅಭಿಪ್ರಾಯ ಪಡುತ್ತಾನೆ. ತುಳು ಭಾಷೆ ದ್ರಾವಿಡ ಭಾಷೆಗಳಲ್ಲಿ ಶಕ್ತಿಯುತ ಭಾಷೆ ಎಂಬ ಸ್ಥಾನವನ್ನು ಪಡೆದಿದೆ. ದ್ರಾವಿಡ ಭಾಷೆಗಳನ್ನು ಮುಖ್ಯವಾಗಿ ದಕ್ಷಿಣ ದ್ರಾವಿಡ, ಮಧ್ಯದ್ರಾವಿಡ, ಉತ್ತರದ್ರಾವಿಡ ಎಂಬುದಾಗಿ ವಿಂಗಡಿಸಲಾಗಿದೆ. ತುಳು,ತಮಿಳು, ಮಲೆಯಾಳಂ, ಕನ್ನಡ, ಕೊಡಗು, ತೊದ, ಬಡಗ ಇತ್ಯಾದಿ ಭಾಷೆಗಳನ್ನು ದಕ್ಷಿಣ ದ್ರಾವಿಡ ಭಾಷೆಗಳು ಎಂದೂ ತೆಲುಗು, ಗೊಂಡಿ, ಕೊಂಡ, ಪೆಂಗು, ಮುಂಡ, ಕುಇ, ಕೋಲಾಮಿ, ಪರ್ಜಿ, ನಾಯ್ಕಿ, ಗದಬ ಮೊದಲಾದ ಭಾಷೆಗಳನ್ನು ಮಧ್ಯ ದ್ರಾವಿಡ ಭಾಷೆಗಳು ಎಂದೂ ಕುರುಖ್, ಮಲ್ತೊ, ಬ್ರಾಹುಈ ಭಾಷೆಗಳನ್ನು ಉತ್ತರ ದ್ರಾವಿಡಗಳೆಂದು ಕರೆಯುತ್ತಾರೆ.

ತುಳು ತನ್ನ ವ್ಯಾಪ್ತಿಯ ದಕ್ಷಿಣ ದ್ರಾವಿಡ ಭಾಷೆಗಳೊಂದಿಗೆ ಹೆಚ್ಚು ನಿಕಟ ಸಂಬಂಧ ಹೊಂದಿಲ್ಲದಿರುವುದು ವಿದ್ವಾಂಸರ ಕುತೂಹಲಕ್ಕೆ ಕಾರಣವಾಗಿದೆ. ಭೌಗೋಳಿಕವಾಗಿ ತುಳು ದ್ರಾವಿಡ ಭಾಷೆಗಳಾದ ಕನ್ನಡ, ಮಲೆಯಾಳಂ ಭಾಷೆಗಳಿಗೆ ಸಮೀಪವಾಗಿದ್ದರೂ ದೂರದ ಮಧ್ಯದ್ರಾವಿಡ ಭಾಷೆಗಳೊಂದಿಗೆ ಹೋಲಿಕೆ ಪಡೆದಿರುವುದು ಗಮನಾರ್ಹ ಸಂಗತಿ. ತುಳು ದಕ್ಷಿಣ ದ್ರಾವಿಡ ಭಾಷಾವರ್ಗದೊಂದಿಗೆ ಸೇರುವುದಕ್ಕಿಂತ ಮಧ್ಯ ದ್ರಾವಿಡ ಭಾಷಾಪರಿವಾರದೊಂದಿಗೆ ಸೇರತಕ್ಕದ್ದೆಂದು ಡಾ.ಭ.ಕೃಷ್ಣಮೂರ್ತಿ ಅವರು ಅಭಿಪ್ರಾಯಪಡುತ್ತಾರೆ. ಡಾ.ಎಂ.ಬಿ.ಎಮಿನೋ ಅವರು ಕೃಷ್ಣಮೂರ್ತಿ ಅವರ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿದರೂ ತುಳುವನ್ನುಮಧ್ಯ ದ್ರಾವಿಡದೊಂದಿಗೆ ಸೇರಿಸಲು ಇನ್ನೂ ಹೆಚ್ಚಿನ ಆಧಾರಗಳು ಬೇಕು ಎಂದಿದ್ದಾರೆ. ಎಲ್ಲಿಸ್, ಕಾಲ್ಡ್‌ವೆಲ್ ಮೊದಲಾದ ವಿದ್ವಾಂಸರು ತುಳು ದಕ್ಷಿಣ ದ್ರಾವಿಡ ಭಾಷೆ ಎಂದಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ತುಳುವಿನ ಸ್ಥಾನ ವಿವೇಚನೆಯ ಬಗ್ಗೆ ಎದ್ದ ಈ ವಿವಾದಗಳನ್ನು ಗಮನದಲ್ಲಿರಿಸಿಕೊಂಡ ಪಿ.ಎಸ್.ಸುಬ್ರಹ್ಮಣ್ಯ ಅವರು ಧ್ವನಿಮಾ ಮತ್ತು ಆಕೃತಿಮಾವನ್ನು ವಿವರವಾಗಿ ಅಭ್ಯಸಿಸಿ ತುಳು ದಕ್ಷಿಣ ದ್ರಾವಿಡಕ್ಕೆ ಸೇರಿದ ಸ್ವತಂತ್ರ ಭಾಷೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸೌತ್‌ವರ್ತ್ ಅವರು ದಕ್ಷಿಣ ದ್ರಾವಿಡದೊಳಗೆ ತುಳುವನ್ನು ಇರಿಸುವುದು ಸರಿಯಲ್ಲ ಎಂದಿದ್ದಾರೆ (ಉದ್ಧೃತ: ಸವದತ್ತಿ ಮಠ, ೧೯೮೬). ತಮಿಳು, ಮಲೆಯಾಳಂ, ಕನ್ನಡ ಭಾಷೆಗಳು ಮೂಲ ದಕ್ಷಿಣ ದ್ರಾವಿಡ ಭಾಷೆಯಿಂದ ಬೇರ್ಪಡುವ ಮುನ್ನವೇ ತುಳು ಭಾಷೆ ಸಿಡಿದು ಹೊರ ಬಂದಿರುವ ಬಗ್ಗೆ ಕಲ್ಪನೆಯೂ ಇದೆ. ಒಟ್ಟಿನಲ್ಲಿ ತುಳು ದಕ್ಷಿಣ ದ್ರಾವಿಡದಿಂದ ಸಿಡಿದು ಸ್ವತಂತ್ರ ಭಾಷೆಯೆಂಬ ಅಭಿಪ್ರಾಯ ಹೆಚ್ಚಿನ ವಿದ್ವಾಂಸರಲ್ಲಿದೆ. ಮೂಲದಕ್ಷಿಣ ದ್ರಾವಿಡದಿಂದ ತುಳು ಮಾತ್ರ ಮೊದಲು ಸ್ವತಂತ್ರವಾಯಿತು ಎಂದು ವಿದ್ವಾಂಸರು ಉದಾಹರಣೆ ಸಹಿತ ತೋರಿಸಿಕೊಟ್ಟಿದ್ದಾರೆ. ತುಳು ದಕ್ಷಿಣ ದ್ರಾವಿಡಕ್ಕೆ ಸೇರಿದರೂ ಅದು ಕೆಲವು ವಿಶಿಷ್ಟತೆಗಳನ್ನು ಹೊಂದಿದೆ. ತುಳುವಿನ ಧ್ವನಿಮಾ ಹಾಗೂ ಆಕೃತಿಮಾಗಳ ಅಧ್ಯಯನದಿಂದ ಇದು ತಿಳಿದುಬರುತ್ತದೆ.

ಜಗತ್ತಿನ ಪ್ರತಿಯೊಂದು ಭಾಷೆಯೂ ತನ್ನದೇ ಆದ ಮೂಲ ಭಾಷೆಯನ್ನು ಹೊಂದಿರುತ್ತದೆ. ಒಂದೇ ಮೂಲಭಾಷೆಯಿಂದ ಹುಟ್ಟಿ ಬೆಳೆದು ಬಂದ ಭಾಷೆಗಳಲ್ಲಿ ಸಾಮಾನ್ಯವಾಗಿ ಒಂದಲ್ಲಾ ಒಂದು ರೀತಿಯ ಸಾಮ್ಯತೆ ಇದ್ದೇ ಇರುತ್ತದೆ. ಅಂತಹ ಭಾಷೆಗಳು ಸಾಮಾನ್ಯವಾಗಿ ಒಂದೇ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳಾಗಿ ಕಂಡುಬರುತ್ತವೆ. ಹಾಗಾಗಿ ಇಂದು ಪ್ರಚಲಿತವಿರುವ ಭಾಷೆ ಹಿಂದೆ ಯಾವುದೋ ಒಂದು ಭಾಷೆಯಿಂದ ಬೇರ್ಪಟ್ಟಿರಬೇಕು. ಒಂದು ಭಾಷಾವರ್ಗಕ್ಕೆ ಸೇರಿದ ಭಾಷೆಗಳು ಕಾಲಕಾಲಕ್ಕೆ ಪರಿವರ್ತನೆಗೊಂಡು ಬೆಳೆದು ಬಂದು ತಮ್ಮದೇ ಆದ ಒಂದು ಇತಿಹಾಸವನ್ನು ಸಂಪಾದಿಸಿವೆ. ಆದರೆ ಮೂಲದಲ್ಲಿ ಅವು ಯಾವುದೋ ಒಂದು ಭಾಷಾವಂಶಕ್ಕೆ ಸೇರಿರುತ್ತವೆ. ನಂತರ ಮೂಲದಿಂದ ಟಿಸಿಲೊಡೆದು ಸ್ವತಂತ್ರವಾಗಿ ಬೆಳೆಯುತ್ತದೆ. ಭಾಷೆಗಳ ಆಂತರಿಕ ಮತ್ತು ಬಾಹ್ಯ ಸಂರಚನೆಗಳ ಮೂಲಕ ಮೂಲಸ್ಥಿತಿಯನ್ನು ತಲುಪಲು ಸಾಧ್ಯ. ಹೀಗೆ ಮೂಲಭಾಷೆಯ ಪುನರಚನೆಯ ಮೂಲಕ

ಭಾಷಾವಂಶವನ್ನು ಗುರುತಿಸಲು ಸಾಧ್ಯವಿದೆ. ಈ ಸೂತ್ರದ ಹಿನ್ನಲೆಯಲ್ಲಿ ಭಾಷಾವಿಜ್ಞಾನಿಗಳು ಪ್ರಪಂಚದ ಭಾಷೆಗಳನ್ನು ಹಲವು ವಂಶಗಳಾಗಿ ವರ್ಗೀಕರಿಸಿದ್ದಾರೆ. ಹೀಗೆ ಭಾಷೆಗಳನ್ನು ಅವುಗಳ ಮೂಲಭಾಷೆಯನ್ನು ಆಧರಿಸಿ ವಾಂಶಿಕವಾಗಿ ಬೇರೆಬೇರೆ ಪರಿವಾರ, ಉಪಪರಿವಾರ, ವರ್ಗ, ಉಪವರ್ಗ ಮೊದಲಾದವುಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ವಿಧಾನವನ್ನು ವಾಂಶಿಕ ವರ್ಗೀಕರಣವೆನ್ನುತ್ತಾರೆ. ಬೇರೆ ಭಾಷೆಗಳ ಪ್ರಭಾವ ಎಷ್ಟೇ ಇದ್ದರೂ ಒಂದು ಭಾಷೆಯ ಮೂಲಭೂತ ಅವಶ್ಯಕ ಶಬ್ದಗಳು ಆ ಭಾಷೆಯವೇ ಆಗಿದ್ದು ಉಳಿದುಬರುತ್ತವೆ. ಹೀಗೆ ಗುರುತಿಸಿದ ಭಾಷಾ ಪರಿವಾರಗಳಲ್ಲಿ ದ್ರಾವಿಡ ಭಾಷಾವರ್ಗವು ಜಗತ್ತಿನ ಅತ್ಯಂತ ಹಿರಿಯ ಭಾಷಾ ಪರಿವಾರಗಳಲ್ಲಿ ಒಂದಾಗಿದೆ.

ದ್ರಾವಿಡ ಭಾಷೆಗಳಲ್ಲಿ ಇಂದು ಗುರುತಿಸಲಾದ ಎಪ್ಪತ್ತಕ್ಕೂ ಹೆಚ್ಚು ಭಾಷೆಗಳು ಬೇರೆ ಬೇರೆ ಕಾಲಘಟ್ಟದಲ್ಲಿ ಮೂಲ ದ್ರಾವಿಡದಿಂದ ಪ್ರತ್ಯೇಕಗೊಂಡು ಸ್ವತಂತ್ರ ಭಾಷೆಗಳಾಗಿವೆ. ಇದರಿಂದಾಗಿ ಈಗಲೂ ಈ ಭಾಷೆಗಳಲ್ಲಿ ರಚನಾ ಸ್ವರೂಪದಲ್ಲಿ ಸಾಮ್ಯತೆಯನ್ನು ಕಾಣಬಹುದಾಗಿದೆ. ಈ ಭಾಷೆಗಳ ಆಂತರಿಕ ಮತ್ತು ಭಾಹ್ಯ ಸಂರಚನೆಯ ಮೂಲಕ ಮೂಲ ಭಾಷೆಯನ್ನು ಪುನಾರಚಿಸಲಾಗಿದೆ. ಅದನ್ನು ಮೂಲದ್ರಾವಿಡ ಭಾಷೆಯೆಂದು ಕರೆದು, ಈ ಎಲ್ಲಾ ಭಾಷೆಗಳು ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆಗಳೆಂದು ಗುರುತಿಸಲಾಗಿದೆ.

ಆಧುನಿಕ ಭಾಷಾ ವಿಜ್ಞಾನಿಗಳು ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಎರಡು ಮುಖ್ಯ ತತ್ವಗಳನ್ನು ಅನುಸರಿಸಲಾಗುತ್ತದೆ. ಆಯಾ ಭಾಷೆಗಳಲ್ಲಿ ಕಂಡು ಬರುವ ಸಮಾನ ಪದಗಳ ಸಾದೃಶ್ಯವನ್ನಾಧರಿಸಿ ಅವು ಒಂದೇ ಮೂಲದಿಂದ ಬಂದಿದೆಯೇ ಎಂದು ಪರಿಶೀಲಿಸುತ್ತಾರೆ. ಸಂಬಂಧಿತ ಭಾಷೆಗಳಲ್ಲಿ ಕಂಡು ಬರುವ ಸಮಾನ ರೂಪಗಳನ್ನಾಧರಿಸಿ, ಅಂತಹ ಜ್ಞಾತಿ ಪದಗಳ ಹೋಲಿಕೆಯ ಸಾದೃಶ್ಯದಿಂದ ಮೂಲ ದ್ರಾವಿಡ ರೂಪವನ್ನು ಗುರುತಿಸುತ್ತಾರೆ. ಒಂದೇ ಮೂಲದಿಂದ ಹೊರಟ ಭಿನ್ನ ಭಾಷೆಗಳಲ್ಲಿನ ಜ್ಞಾತಿ ಪದಗಳನ್ನು ಹೋಲಿಸುವಾಗ ಸಾದೃಶ್ಯಗಳನ್ನು ಕಾಣಬಹುದಾಗಿದೆ. ಉದಾ:

| **ತಮಿಳು** | **ಕನ್ನಡ** | **ತೆಲುಗು** | **ಮಲೆಯಾಳಂ** | **ತುಳು** | **ಸಂಸ್ಕೃತ** |
|---|---|---|---|---|---|
| ಎಲಿ | ಇಲಿ | ಎಲುಕ | ಎಲಿ | ಎಲಿ | ಮೂಷಕ |
| ಇರಂಡು | ಎರಡು | ರೆಂಡು | ರಂಡ್ | ರಡ್ಡ್ | ದ್ವಿ |
| ಚೆವಿ | ಕಿವಿ | ಚೆವಿ | ಚೆವಿ | ಕೆಬಿ | ಕರ್ಣ |
| ಎರುತ್ತು | ಎತ್ತು | ಎದ್ದು | ಎರುತು | ಎರು | ವೃಷಭ |

ಇಲ್ಲಿ ಸಂಸ್ಕೃತವನ್ನು ಹೊರತು ಪಡಿಸಿ ಉಳಿದ ಭಾಷೆಗಳಲ್ಲಿ ಸಾದೃಶ್ಯವನ್ನು ಗುರುತಿಸಬಹುದು. ದ್ರಾವಿಡ ಭಾಷೆಗಳು ಭಾರತದಾದ್ಯಂತ ಪಸರಿಸಿದ್ದರೂ ಮುಖ್ಯವಾಗಿ ದಕ್ಷಿಣ ಭಾರತದ ಪ್ರಮುಖ ಭಾಷೆಗಳಾಗಿವೆ. 1816ರಲ್ಲಿ ಫ್ರಾನ್ಸಿಸ್ ಎಲ್ಲಿಸ್ ದ್ರಾವಿಡ ಭಾಷೆಗಳು ಸಂಸ್ಕೃತ ಜನ್ಯವಲ್ಲ. ಅವು ಸ್ವತಂತ್ರ ಭಾಷೆಗಳು ಎಂದು ಸಾರಿದ ಬಳಿಕ ಈ ಭಾಷೆಗಳ ಬಗೆಗೆ ಸರಿಯಾದ ತಿಳುವಳಿಕೆ ಉಂಟಾಯಿತು. ಒಟ್ಟಿನಲ್ಲಿ ದ್ರಾವಿಡ ಭಾಷಾ ಪರಿವಾರದಲ್ಲಿ ಸ್ವತಂತ್ರವಾಗಿ ನಿಲ್ಲಬಲ್ಲ ಹಾಗು ಚೆನ್ನಾಗಿ ಬೆಳೆದ ಭಾಷೆಗಳಲ್ಲಿ ತುಳುವು ಒಂದು. ಇದರಿಂದ ಜಗತ್ತಿನ ಭಾಷಾ ವಿಜ್ಞಾನಿಗಳ ಗಮನ ತುಳು ಭಾಷೆಯ ಕಡೆಗೆ ಹರಿಯಿತು. ಇಂದಿಗೆ ತುಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಮಹತ್ವದ ಅಧ್ಯಯನಗಳು ನಡೆದಿವೆ. ಒಟ್ಟಿನಲ್ಲಿ ತುಳು ಭಾಷೆ ದ್ರಾವಿಡ ಭಾಷೆಗಳಲ್ಲಿ ಶಕ್ತಿಯುತ ಭಾಷೆ ಎನ್ನುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ಪಂಚದ್ರಾವಿಡ ಭಾಷೆಗಳಲ್ಲಿ ತುಳು ಭಾಷೆಯೂ ತನ್ನ ಸ್ಥಾನವನ್ನು ಪಡೆದಿದೆ.

## ಪರಾಮರ್ಶನ ಗ್ರಂಥಗಳು


1. ತುಳು ಭಾಷೆ ಒಂದು ಅಧ್ಯಯನ: ಡಾ.ಬಿ.ಎ. ವಿವೇಕ ರೈ, ಪ್ರಬುದ್ಧ ಕರ್ನಾಟಕ, ಸಂಪುಟ ೫೩, ಸಂಚಿಕೆ೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ತುಳು ಭಾಷೆ ಸಾಹಿತ್ಯ ಸಂಪ್ರದಾಯ: ಡಾ.ಕೆ.ವಿ. ಜಲಜಾಕ್ಷಿ, ೨೦೦೩, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
3. ತುಳುಭಾಷೆ-ಕಿರುಪರಿಚಯ: ಡಾ. ರಾಮಚಂದ್ರ ರಾವ್, ಐಬಿಎಚ್ ಪ್ರಕಾಶನ, ಬೆಂಗಳೂರು